ಚಿಕ್ಕಂದಿನಿಂದಲೂ ಅನೇಕ ಕೆಲಸದವರನ್ನು ನೋಡಿದ್ದೇನೆ. ಹಳ್ಳಿಯಲ್ಲಿರುವ ಮುದುಕಿಯರೂ ಕೂಡ ದುಡ್ಡಿನ ಲೆಕ್ಕವನ್ನು ಅದೆಷ್ಟು ಚೆನ್ನಾಗಿ ನೆನಪಿಟ್ಟುಕೊಂಡಿರ್ತಾರೆ. ನಮ್ಮ ಕೆಲಸದವಳಂತೂ ಬಲು ಜೋರು. ಅವಳಿಗೆ ಸಾಲ ಕೊಟ್ಟಾಗ ನಾನು ಪುಸ್ತಕದಲ್ಲಿ ಲೆಕ್ಕ ಬರೆದಿಟ್ಟುಕೊಂಡಿರುತ್ತೇನೆ. ಅವಳು ತಲೆಯಲ್ಲಿಟ್ಟುಕೊಂಡು ಬಾಯಲ್ಲೇ ಎಲ್ಲ ಹೇಳುತ್ತಾಳೆ. ಸೋದರ ಮಾವನ ಮನೆಯಲ್ಲಿ ಕೆಲಸ ಮಾಡುವ ನಾಗಮ್ಮ ಹತ್ತು ವರ್ಷಗಳ ಕೆಳಗಿನ ಬ್ಯಾಂಕ್ ಲೆಕ್ಕವನ್ನು ಬಾಯಲ್ಲೇ ಒಪ್ಪಿಸುತ್ತಿದ್ದಳು. ಇಂಥದ್ದನ್ನು ಮೊದಲ ಬಾರಿ ನೋಡಿದ್ದೆ. ಪ್ರಿಯಂವದಾರ ಬಳಿ ಧಾವಿಸಿದೆ. ಅವರು ಶಾಂತವಾಗಿ, "ಹೌದು... ನಂದಿನಿ ಇರುವುದೇ ಹಾಗೆ. ಅವಳಿಗೆ ಓದಿಯಾದ ಒಂದಕ್ಷರವೂ ಬರೆಯಲಾಗುವುದಿಲ್ಲ. ದುಡ್ಡೆಲ್ಲ ಅವಳಿಗೆ ಕಾಗದವೇ... ಇವಳ ಅಕ್ಕತಂಗಿಯರು ದುಡ್ಡೆಣಿಸಲು ಕಲಿತಿದ್ದಾರೆ. ಇವಳಿಗೇ ಗೊತ್ತಿಲ್ಲ. ಈಗ ನಾನು ಕಲಿಸುತ್ತೇನೆಂದರೆ ಕಲಿಯಲು ಸಿದ್ಧಳಿಲ್ಲ. 'ವಿದ್ಯೆ ಇವಳ ತಲೆಗೆ ನಾಟುವುದಿಲ್ಲ... ಕಲಿಸಬೇಡಿ' ಎಂದು ಅದ್ಯಾರೊ ಬಾಬಾ ಹೇಳಿಬಿಟ್ಟಿದ್ದಾರಂತೆ. ಅದಕ್ಕೇ ಇವಳು ಕಲಿಯಲು ಸಿದ್ಧಳಿಲ್ಲ. ನಾವೂ ಪ್ರತಿ ತಿಂಗಳ ದುಡ್ಡನ್ನು ಇವಳಮ್ಮನಿಗೆ ಕಳಿಸುತ್ತೇವೆ" ಎಂದರು. ನಾನು, "ಈಗ ನೀನು ನಿಮ್ಮ ಊರಿನಿಂದ ದೂರದಲ್ಲಿದ್ದೀಯಾ. ಬೆಂಗಳೂರಿನಲ್ಲಿ... ಇಲ್ಲಿ ಎಲ್ಲರೂ ವಿದ್ಯೆ ಕಲಿಯಬೇಕು. ಬಾಬಾರಿಗಿಂತ ದೊಡ್ಡವಳು ಶಾರದೆ. ಅವಳು ಎಲ್ಲರಿಗೂ ಒಲಿಯುತ್ತಾಳೆ" ಎಂದೆ. ಹಾವು ತುಳಿದಂತೆ ಬೆಚ್ಚಿದವಳು, "ಉಹ್ಞೂಂ... ಹಾಗೆಲ್ಲ ಬಾಬಾರಿಗೆ ವಿರುದ್ಧ ಹೋಗುವುದು ತಪ್ಪು" ಎಂದು ಕೆನ್ನೆ ಬಡಿದುಕೊಂಡು ಅಡ್ಡಡ್ಡ ತಲೆಯಾಡಿಸಿದಳು. ನಮ್ಮಿಬ್ಬರ ಮಾತೂ ಬತ್ತಿದಂತಾಗಿ ಮೌನವಾದೆವು.

ನಾನು ಹೊರಟಾಗ ನಂದಿನಿ, "ನಿಮ್ಮೂರು... ವಿದ್ಯೆ... ಶಾರದೆ... ಎಂದೆಲ್ಲಾ ಹೇಳ್ತೀರಿ. ಊರು ಸರಿಯಾಗಿಲ್ಲ ಬಿಡಿ. ನನಗೆ ಗುಟಕಾ ಪಾನ್ ದೊರೆಯಲಿಲ್ಲವೆಂದರೆ ಅದೆಂಥ ಊರು?" ಎಂದಳು. ನಾನು ಪ್ರಶ್ನಾರ್ಥಕವಾಗಿ ನೋಡಿದಾಗ ಪ್ರಿಯಂವದಾ ವಿವರಿಸಿದರು. ನಂದಿನಿಗೆ ನಿತ್ಯವೂ ತಂಬಾಕು ಮಿಶ್ರಿತ ಗುಟಕಾ ಪಾನ್ ತಿನ್ನುವ ಚಟ. ಕೆನ್ನೆಯಲ್ಲಿ ಅದನ್ನು ಒತ್ತರಿಸಿಕೊಂಡೇ ಕೆಲಸ ಮಾಡುವುದು. "ಬೆಂಗಳೂರಿನಲ್ಲಿ ಅದು ದೊರೆಯುವುದೇ ಇಲ್ಲ... ಬೇಕಾದರೆ ನೀನೇ ಹೋಗಿ ವಿಚಾರಿಸಿಕೊಂಡು ಬಾ" ಎಂದರಂತೆ. ಪರ ಊರು, ಅರಿಯದ ಭಾಷೆ... ಎಲ್ಲೂ ಹೋಗಿ ಕೇಳಲು ಧೈರ್ಯವಾಗಲಿಲ್ಲ. ಸುಮ್ಮನಾದಳು. ಗುಟಕಾ ಪಾನ್ ಚಟ ತಾನಾಗೇ ಹೋಯಿತು. "ಇಲ್ಲೆಲ್ಲಾದರೂ ಸಿಗುತ್ತಾ? ನಿಮಗೆ ಗೊತ್ತಾ?" ಎಂದು ಕೇಳಿದರು ಪ್ರಿಯಂವದಾ. ಚಿಕ್ಕ ಮಕ್ಕಳನ್ನು ಏಮಾರಿಸುವಂತೆ ನಾನು, "ಉಹ್ಞೂಂ... ಸಿಗಲ್ಲ" ಎನ್ನುತ್ತ ಇಳಿದು ಬಂದೆ. ತಲೆಯಲ್ಲಿ ಒಂದೇ ಗುಂಗು. ನಾವು 'ಮೇಲೆತ್ತುತ್ತೇವೆ... ಸುಧಾರಿಸುತ್ತೇವೆ...' ಎಂದರೆ ಸಾಲದು. ಅವರಿಗೂ ಆಸಕ್ತಿಯಿರಬೇಕು. ಚೆನ್ನಾಗಿ ಬದುಕಬೇಕೆಂಬ ವಾಂಛೆ ಇರಬೇಕು. ತಮ್ಮನ್ನು ಸುಧಾರಿಸಿಕೊಳ್ಳುತ್ತ ಜೀವನವನ್ನು ಸುಧಾರಿಸಬೇಕು. ಇಲ್ಲವಾದಲ್ಲಿ... ಎಲ್ಲ ಪ್ರಯತ್ನಗಳೂ ವ್ಯರ್ಥವೇ.

ಆದರೂ ನಾನು ಬಿಡಲಿಲ್ಲ. ಮರುದಿನ ನಮ್ಮ ಮನೆಗೆ ಕೆಲಸಕ್ಕೆ ಬಂದಾಗ, "ನಂದಿನಿ... ಅಕ್ಷರ ಬೇಡವಾದರೆ ಬಿಡು. ಆದರೆ, ದುಡ್ಡು, ಕಾಸು ಎಣಿಸುವುದನ್ನು ಕಲಿತುಕೊ. ನಾಳೆ ಯಾರಾದರೂ ಮೋಸ ಮಾಡಿದರೆ?... ಎರಡು ಮಕ್ಕಳಿವೆ ಎಂದೆಯಲ್ಲ. ಅವರ ಭವಿಷ್ಯ ನೋಡಬೇಡವೇ? ಗಂಡ ಬೇರೆ ಜೊತೆಗಿಲ್ಲ ಎನ್ನುತ್ತೀಯ. ಹೊರಗಿನವರಷ್ಟೇ ಅಲ್ಲ... ಮನೆಯವರೂ ಮೋಸ ಮಾಡಬಹುದು" ಎಂದೆ. ತಣ್ಣಗಿನ ಪ್ರತಿಕ್ರಿಯೆ. "ನನಗೆ ಅದೆಲ್ಲ ಗೊತ್ತಿಲ್ಲ ದೀದಿ. ಬೇಕಾಗಿಲ್ಲ... ನಾನು ಮನೆಗೆಲಸ ಮಾಡುತ್ತೇನೆ. ಅದಕ್ಕೆ ಪ್ರತಿಯಾಗಿ ಅವರು ನನಗೆ, ನನ್ನ ಮಕ್ಕಳಿಗೆ ಹೊಟ್ಟೆ, ಬಟ್ಟೆಗೆ ಸರಿಯಾಗಿ ಕೊಡಬೇಕು" ಎಂದಳು. ಅಬ್ಬ! ಎಂಥ ವಿಚಿತ್ರ ಹೆಣ್ಣು... ಜೊತೆಗೆ ಜೀವನಕ್ಕಾಗಿ ಅದೆಷ್ಟು ಸಿಂಪಲ್ ಲಾಜಿಕ್. ಮನೆ, ಮಠ, ಒಡವೆ, ವಸ್ತ್ರ... ಎಲ್ಲ ಒಮ್ಮೆ ಗಿರಕಿ ಹೊಡೆದು ನಿಂತವು.